ಅವಶ್ಯಕವಾಗಿ ಆಗಬೇಕಾಗಿದೆ. ಆದರೆ ಈ ಸರ್ಕಾರದ ವಿಳಂಬ ನೀತಿಯನ್ನು ನೋಡಿದರೆ ಈ ವರ್ಗದ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇಲ್ಲ ಎಂದು ಕಾಣುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ವೆಂಕಟಸ್ವಾಮಿ ಆಯೋಗದ ವರದಿಯನ್ನು ಸಲ್ಲಿಸಿದ್ದು ತಮಗೆಲ್ಲಾ ಗೊತ್ತಿದೆ. ೩೧-೩-೧೯೮೬ರಲ್ಲಿ ಆಯೋಗದ ವರದಿಯ ಬಗ್ಗೆ ಸಾಕಷ್ಟು ವಿರೋಧ ಬಂದಿದ್ದರಿಂದ ಸರ್ಕಾರ ಮೂರು ವರ್ಷಗಳ ಕಾಲ ತಾತ್ಕಾಲಿಕ ಮಿಸಲಾತಿ ಆಜ್ಞೆಯನ್ನು ೧೫-೧೦-೧೯೮೬ರಲ್ಲಿ ಕೊಟ್ಟಿದೆ ನಾವು ವಚನಕ್ಕೆ ಬದ್ಧರಾಗಿದ್ದೇವೆ. ಮೂರನೆಯ ಆಯೋಗವನ್ನು ನಾವು ಸಧ್ಯದಲ್ಲಿಯೇ ರಚನೆ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಈಗಾಗಲೇ ಮೂರು ವರ್ಷ ಕಳೆದಿದೆ, ಇನ್ನು ಎರಡು ವರ್ಷಗಳು ಕಳೆಯಬೇಕು ಎಂದು ಹೇಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ —ವೆಂಕಟಸ್ವಾಮಿ ಆಯೋಗದ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದುದು ೩೧-೩-೧೯೮೬ರಲ್ಲಿ. ತಾತ್ಕಾಲಿಕ ಮಿಸಲಾತಿ ಆಜ್ಞೆಯನ್ನು ೧೫-೧೦-೧೯೮೬ರಲ್ಲಿ ಕೊಟ್ಟಿದ ಮೂರು ವರ್ಷ ಹೇಗೆ ಆಗುತ್ತದೆ ? ಇನ್ನೂ ಒಂದು ವರ್ಷ ಕೂಡ ಆಗಿಲ್ಲ. ಆದಷ್ಟು ಬೇಗ ಅದರ ರಚನೆ ಮಾಡುತ್ತೇವೆ.

ಯಾತ್ರಿಕರ ಮೇಲೆ ಹೆಚ್ಚಿಸಲಾದ ತೆರಿಗೆ

೭೧೬. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಗತ್ ಪ್ರಸಿದ್ಧವಾದ ಗೊಮ್ಮಟೇಶ್ವರನನ್ನು ನೋಡಲು ಯಾತ್ರಿಕರು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಯಾತ್ರಿಕರು ಬೆಟ್ಟವನ್ನು ಹತ್ತಲು ರೂ. ೨-೦೦ ಯನ್ನು ಒಬ್ಬರಿಗೆ ತೆರಿಗೆ ವಿಧಿಸಿ ಯಾತ್ರಿಕರು ಬರುವುದನ್ನು ತಡೆಗಟ್ಟುವುದು ಸರ್ಕಾರದವರ ನೀತಿಯೇ ?

ಇ) ಇಂತಹ ಏರಿಕೆಯಿಂದ ಆಡಳಿತ ಮಂಡಳಿಗೆ ಹಾಗೂ ಸರಕಾರಕ್ಕೆ ಬಂದ ಲಾಭವೆಷ್ಟು ಹಾಗೂ ಯಾವ ದಿನಾಂಕದಂದ ಏರಿಕೆಯನ್ನು ಮಾಡಲಾಯಿತು ?

ಈ) ಮುಜರಾಯಿ ಆಯುಕ್ತರ ಶಿಫಾರಸ್ಸು ಇಲ್ಲದೇ ಸರಕಾರವೇ ಏಕಾಏಕಿ ಏರಿಕೆ ಮಾಡಿದೆಯೇ ?

ಶ್ರೀ ಕೆ. ಅಮರನಾಥ್‌ಶೆಟ್ಟಿ (ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಯಾತ್ರಿಕರಿಂದ ರೂ. ೨-೦೦ಗಳನ್ನು ಕ್ಷೇತ್ರದ ಅಭಿವೃದ್ಧಿಗಾಗಿ ಪಡೆಯಲಾಗುತ್ತಿದೆ ವಿನಹ ಯಾತ್ರಿಕರನ್ನು ತಡೆಗಟ್ಟುವುದು ಸರ್ಕಾರದ ನೀತಿಯಲ್ಲ.

ಇ) ಸರ್ಕಾರದ ಆದೇಶ ಸಂಖ್ಯೆ ಆರ್‌ಡಿಪಿ೨೦೯ ಎಂಇಟಿ ೮೫ ದಿನಾಂಕ ೯-೪-೮೭ರ ಪ್ರಕಾರ ದಿನಾಂಕ ೧-೧೦-೮೭ ರಿಂದ ರೂ. ೧-೦೦ ರಿಂದ ೨-೦೦ಗಳಿಗೆ ಹೆಚ್ಚಿಸಲಾಯಿತು. ಈ ಏರಿಕೆಯಿಂದಾಗಿ ಎಸ್‌ಡಿಜಿ ಎಂಬ ಮಂಡಳಿಗೆ ರೂ. ೨,೮೬,೮೭೦ ಆದಾಯ ಬಂದಿದ್ದು ಸದರಿ ಹಣವನ್ನು ಕ್ಷೇತ್ರದ ಅಭಿವೃದ್ಧಿಗಾಗಿ ವಿನಿಯೋಗ ಮಾಡಲಾಗುತ್ತಿದೆ. ಸರ್ಕಾರಕ್ಕೆ ಇದರಿಂದ ಲಾಭ ಇಲ್ಲ.

ಈ) ಮುಜರಾಯಿ ಆಯುಕ್ತರ ಶಿಫಾರಸ್ಸಿನ ಮೇರೆಗೆ ಸರ್ಕಾರವು ರೂ. ೧-೦೦ ರಿಂದ ೨-೦೦ಕ್ಕೆ ಕ್ಷೇತ್ರಾಭಿವೃದ್ಧಿ ನಿಧಿಯೆಂದು ಹೆಚ್ಚಿಸಿ ಆದೇಶ ಹೊರಡಿಸಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಈ ಶುಲ್ಕ ಏರಿಕೆಯ ಮುನ್ನ ಒಂದು ವರ್ಷಕ್ಕೆ ಎಷ್ಟು ಜನ ಯಾತ್ರಿಕರು ಬರುತ್ತಿದ್ದರು ? ಈ ಶುಲ್ಕ ಏರಿಕೆಯಾದಮೇಲೆ ಎಷ್ಟು ಜನ ಯಾತ್ರಿಕರು ಬರುತ್ತಿದ್ದಾರೆ? ಮತ್ತೊಂದು ವಿಚಾರ ಹೇಳಿದರೆ ಈ ಮುಜರಾಯಿ ಸಂಸ್ಥೆಗೆ ಹೊರ ರಾಜ್ಯದಿಂದ ಸರ್ಕಾರ ನಾಮಕರಣ

ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ, ಹೊರ ರಾಜ್ಯದವರು ಇಲ್ಲಿ ಬರುವುದರಿಂದ ಯಾವರೀತಿಯ ಉಪಯೋಗವಾಗುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸ ಬೇಕು ?

ಶ್ರೀ ಕೆ. ಅಮರನಾಥ್ ಶೆಟ್ಟಿ.—ಈ ಶುಲ್ಕ ಏರಿಕೆಯ ಮುನ್ನ ಎಷ್ಟು ಜನ ಯಾತ್ರಿಕರು ಬರುತ್ತಿದ್ದರು. ನಂತರ ಎಷ್ಟು ಜನ ಯಾತ್ರಿಕರು ಬರುತ್ತಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಇಲ್ಲ ಅವನ್ನು ನಾನು ಒದಗಿಸುತ್ತೇನೆ. ಈ ಕಮಿಟಿಯಲ್ಲಿ ಹೊರ ರಾಜ್ಯದವರನ್ನು ಸೇರಿಸಬೇಕೆಂದು ಅವಕಾಶ ಮಾಡ ಲಾಗಿದೆ, ಆದ್ದರಿಂದ ಹೊರ ರಾಜ್ಯದವರನ್ನು ಸೇರಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾವಿನಲ್ ಒಂದು ರೂಪಾಯಿ ಇದ್ದುದನ್ನು ಎರಡು ರೂಪಾಯಿಗೆ ಏರಿಕೆ ಮಾಡುವ ಅಗತ್ಯ ಇರಲಿಲ್ಲ. ಈ ರೀತಿ ಏರಿಕೆ ಮಾಡಿದಮೇಲೆ ಯಾತ್ರಿಕರ ಸಂಖ್ಯೆ ಕಡಿಮೆಯಾಗಿದೆಯೇ ? ಇನ್ನು ಹೊರ ರಾಜ್ಯದವರನ್ನು ಇಲ್ಲಿಯ ಸದಸ್ಯರಾಗಿ ನೇಮಕ ಮಾಡುವುದರಿಂದ ನಮ್ಮ ರಾಜ್ಯಕ್ಕೆ ಇದರ ಉಪಯೋಗ ಏನು ? ಆ ರೀತಿ ಕಾನೂನು ಏನಾದರೂ ಇದ್ದರೆ ಅದನ್ನು ಮಾರ್ಪಾಡು ಮಾಡುವ ಬಗ್ಗೆ ಆಲೋಚನೆ ಮಾಡಿ ರಾಜ್ಯದಲ್ಲಿರುವವರನ್ನೇ ನೇಮಕ ಮಾಡುವುದು ಅಗತ್ಯ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರ ಹೇಳಬೇಕು.

ಶ್ರೀ ಕೆ. ಅಮರನಾಥ್ ಶೆಟ್ಟಿ.—ಮುಂಚೆ ಆದಾಯ ಬರುವುದಕ್ಕಿಂತಲೂ ಈಗ ಜಾಸ್ತಿ ಆದಾಯ ಬರುತ್ತಿದೆ. ಯಾತ್ರಿಕರ ಸಂಖ್ಯೆಯೂ ಕೂಡ ಕಡಿಮೆಯಾಗಿಲ್ಲ, ಜಾಸ್ತಿಯಾಗಿದೆ. ಇನ್ನು ಹೊರ ರಾಜ್ಯದವರನ್ನು ಏತಕ್ಕೆ ಸೇರಿಸಿದ್ದೀರಿ ಎಂದು ಕೇಳಿದ್ದೀರಿ. ಮುಂದಕ್ಕೆ ಅವರನ್ನು ಸೇರಿಸಬಾರದು ಎನ್ನುವ ಬಗ್ಗೆ ಪರಿಶೀಲಿಸಿ ನೋಡುತ್ತೇವೆ.

ಶ್ರೀ ಬಿ. ಎಸ್ ಯಡಿಯೂರಪ್ಪ.—ವರ್ಷಕ್ಕೆ ಸಂಸ್ಥೆಯಲ್ಲಿ ಹೀಗೆ ದುರುಪಯೋಗ ಆಗುತ್ತಿರುವ ಅನೇಕ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ರೀತಿಯ ಪ್ರಕರಣಗಳನ್ನು ಕಡಿಮೆ ಮಾಡುವುದಕ್ಕೆ ನೀವು ಏನು ವ್ಯವಸ್ಥೆಯನ್ನು ಮಾಡಿದ್ದೀರಿ ? ಎರಡನೆಯದಾಗಿ ನೀವು ಇವುಗಳಲ್ಲಿ ಪ್ರತಿ ವರ್ಷವೂ ಆಡಿಟ್ ಮಾಡಿಸತಕ್ಕ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರಾ ?

ಶ್ರೀ ಕೆ ಅಮರನಾಥ್ ಶೆಟ್ಟಿ.—ಮುಜರಾಯಿ ಹಣದಲ್ಲಿ ಸ್ವಲ್ಪ ಹಣವನ್ನು ಮಾತ್ರ ಮುಜರಾಯಿ ಕಮಿಟಿಯ ಖರ್ಚಿಗಾಗಿ ತೆಗೆದುಕೊಳ್ಳುತ್ತೇವೆ. ಇನ್ನುಳಿದ ಹಣವನ್ನು ದೇವಸ್ಥಾನದ ಅಭಿವೃದ್ಧಿಗಾಗಿ ಉಪಯೋಗಿಸುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ತಮಗೆ ಸಿ ಸಾರಿ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಲ್ಲಿ ಹಣ ದುರುಪಯೋಗವಾಗುತ್ತಿರುವುದರಿಂದ ಹಣದ ಭದ್ರತೆಗಾಗಿ ಪ್ರತಿವರ್ಷ ಆಡಿಟ್ ಮಾಡತಕ್ಕ ವ್ಯವಸ್ಥೆ ಏನಾದರೂ ಇದೆಯೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಅಮರನಾಥ್ ಶೆಟ್ಟಿ .—ಪ್ರತಿವರ್ಷವೂ ಆಡಿಟ್ ಮಾಡಿಸುತ್ತಿದ್ದೇವೆ.

ಲಂಬಾಣಿ ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವುದು

೩೪೦. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಕಂದಾಯ ಪುತ್ರ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಲಂಬಾಣಿ ತಾಂಡಗಳನ್ನು ಹಾಗೂ ಇನ್ನಿತರ ಗ್ರಾಮೀಣ ಜನವಸತಿಗಳನ್ನು ರೆವಿನ್ಯೂ ಗ್ರಾಮಗಳಾಗಿ ಘೋಷಿಸುವುದಾಗಿ ಈ ಹಿಂದೆ ಸರ್ಕಾರವು ಭರವಸೆ ನೀಡಿರುವುದು ನಿಜವಲ್ಲವೇ

ಆ) ಹಾಗಿದ್ದಲ್ಲಿ ಈವರೆವಿಗೂ ಆ ರೀತಿಯ ಘೋಷಣೆ ಹೊರಡಿಸದಿರಲು ಕಾರಣವೇನು.

ಇ) ಶೀಘ್ರವಾಗಿ ಘೋಷಣೆಯನ್ನು ಹೊರಡಿಸುವ ಬಗ್ಗೆ ಸರ್ಕಾರದವರು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?